ಶ್ರೀ ಬಿ.ಆರ್. ಗುರುದೇವ್:- ಮಾನ್ಯ ಅಧ್ಯಕ್ಷರೆ, ಈಗತಾನೆ ಮಂತ್ರಿಗಳು 52 ಕಿಲೋಮೀಟರ್ ದೂರದಲ್ಲಿ ಬರುವಂತಹ ಠಾಣೆಗಳು ಏನಿವೆ ಅವುಗಳನ್ನು ಮಾಡಿಕೊಡುತ್ತೇನೆಂದು ಆಶ್ವಾಸನೆ ನೀಡಿದ್ದಾರೆ. ನಾನು ಎರಡು ಹೋಬಳಿಗಳ ಬಗ್ಗೆ ಕೇಳಿದ್ದೇವೆ. ತಮಗೆ ಗೊತ್ತಿರುವ ಹಾಗೆ, ನನ್ನದು ಮಲೆನಾಡು ಪ್ರದೇಶ. ಒಂದು ಸ್ಟೇಷನ್‌ನಿಂದ ಇನ್ನೊಂದು ಸ್ಟೇಷನ್‌ಗೆ ಹೋಗಬೇಕಾದರೆ 60 ಕಿಲೋಮೀಟರ್ ಆಗುತ್ತದೆ. ಇನ್ನೊಂದು ಹಾನಗಾಳುಗೆ ಪೋಲೀಸ್ ಠಾಣೆ ಬೇಕೆಂದು ಕೇಳುತ್ತಿದ್ದೇನೆ. ಈಗಿರುವ ಠಾಣೆಯಿಂದ ನಾನು ಕೇಳುತ್ತಿರುವ ಜಾಗಕ್ಕೆ 30 ಕಿಲೋಮೀಟರ್ ಆದರೂ ಗುಡ್ಡಗಾಡು ಪ್ರದೇಶವಾಗಿರುವುದರಿಂದ ಮತ್ತು ಅತಿಮುಖ್ಯವಾಗಿ ಅಲ್ಲಿ ಕೋಮುಗಲಭೆಯಾಗಿ ನನ್ನ ಕ್ಷೇತ್ರದಲ್ಲಿ ನಾಲ್ಕು ಕೊಲೆಗಳಾಯಿತು. ಅದಕ್ಕೆ ಪರಿಹಾರ ಸಿಕ್ಕಿದೆ. ಆಧ್ಯತೆಯ ಮೇಲೆ ನನ್ನ ಕ್ಷೇತ್ರಕ್ಕೆ ಪೋಲೀಸ್ ಠಾಣೆಗಳನ್ನು ಕೊಡಬೇಕೆಂದು ಮನವಿ ಮಾಡಿದ್ದೆ. ಎರಡನೆಯದಾಗಿ, ಅತಿಮುಖ್ಯವಾಗಿ ಈಗತಾನೆ ಮಂತ್ರಿಗಳು ಹೇಳಿದರು. ಯಾರು ಪ್ರಶ್ನೆ ಕೇಳಲಿ ಕೇಳದಿರಲಿ, ಕೊಡುತ್ತೇವೆಂದು ಹೇಳಿದ್ದಾರೆ, ಸಂತೋಷ. ಆದ್ಯತೆಯ ಮೇಲೆ ಗಮನ ಕೊಟ್ಟು ಮಾಡುತ್ತೇವೆಂದು ಹೇಳಿದ್ದಾರೆ. ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಇಲ್ಲಿಗೆ ಒಂದು ಪೋಲೀಸ್ ಠಾಣೆ ಬೇಕೆಂದು ಮೇಲಧಿಕಾರಿಗಳಿಗೆ ರೆಕಮಂಡ್ ಮಾಡಿದ್ದರು. ಮೊನ್ನೆ ನೋಡಿದ ಪಟ್ಟಿಯಲ್ಲಿ ನನ್ನ ಕ್ಷೇತ್ರಕ್ಕೆ ಒಂದು ಸ್ಟೇಷನ್ ಆಗಲಿ ಅಥವಾ ಔಟ್ ಪೋಸ್ಟ್ ಪೋಲೀಸ್ ಠಾಣೆಯಾಗಲಿ ಒಂದನ್ನು ಕೂಡ ಸೇರಿಸಿಲ್ಲ. ಈ ವರ್ಷ ಸೇರಿಸುವುದಕ್ಕೆ ಪ್ರಯತ್ನ ಮಾಡಿಯೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್:- ಈ ಡಿಮಾಂಡ್ಸ್ ಮುಗಿದ ಮೇಲೆ ಏಪ್ರಿಲ್ ತಿಂಗಳಿನಲ್ಲಿ ಕೊಡುತ್ತೇನೆ.

ಶ್ರೀ ಪಿ. ಬಸವರಾಜ್:- ನಾವು ಕೇಳುತ್ತಿರುವ ಪೋಲೀಸ್ ಠಾಣೆ ಹೊಸ ಅಂಗಡಿಯಲ್ಲಿ. ಅಲ್ಲಿ ಸರ್ಕಾರದ ವಿದ್ಯುತ್ ಯೋಜನೆ ಕಾರ್ಯಾರಂಭವಾಗಿದೆ. ಮತ್ತು ನೀರಾವರಿ ಯೋಜನೆ ಮಂಜೂರಾತಿಯ ಹಂತದಲ್ಲಿದೆ. ಈ ಜಾಗದಿಂದ ಕುಂದಾಪುರದಿಂದ ಪೋಲೀಸ್ ಠಾಣೆಗೆ ಅಂತರ ಸುಮಾರು 50-60 ಕಿಲೋಮೀಟರ್ ಆಗುತ್ತದೆ. ಅಲ್ಲಿ ಸಮಾಜಘಾತುಕ ಶಕ್ತಿಗಳ ವಿರುದ್ಧ ಅಲ್ಲಿ ಜನರಿಗೆ ರಕ್ಷಣೆ ನೀಡುವುದಕ್ಕೆ ಒಂದು ಪೋಲೀಸ್ ಠಾಣೆ ಬೇಕು ಮತ್ತು ಕರ್ನಾಟಕ ಪವರ್ ಕಾರ್ಪೊರೇಷನ್‌ರವರು ಕಟ್ಟಡವನ್ನು ಪೊಲೀಸ್ ಠಾಣೆಗೋಸ್ಕರ ನಿಚನೆ ಮಾಡಿದ್ದಾರೆ. ಅದು ಈಗ ಖಾಲಿಯಿದೆ. ಈ ವರ್ಷ ಇಲ್ಲಿ ಪೋಲೀಸ್ ಠಾಣೆಯನ್ನು ಕಾರ್ಯಾರಂಭ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಧರ್ಮಸಿಂಗ್:- ದಕ್ಷಿಣ ಕನ್ನಡ ಜಿಲ್ಲೆಗೆ ಏನೆಲ್ಲ ಬೇಕೆಂಬ ಬಗ್ಗೆ ವರ್ತಮಾನ ನಮ್ಮಲ್ಲಿದೆ. 50-60 ಕಿಲೋಮೀಟರ್ ದೂರದಲ್ಲಿ ಪೋಲೀಸ್ ಸ್ಟೇಷನ್ ಇಲ್ಲದಿರತಕ್ಕದ್ದನ್ನು ಸರ್ಕಾರ ಗಮನಕ್ಕೆ ತೆಗೆದುಕೊಂಡಿದೆ.

ಅಧ್ಯಕ್ಷರು:- ಮಾನ್ಯ ಸದಸ್ಯರುಗಳಾದ ಹಂಪನಗೌಡರು ಮತ್ತು ಏಕಾಂತಯ್ಯನವರೆ ತಮ್ಮ ಪ್ರಶ್ನೆಗಳಿಗೆ ಮಂತ್ರಿಗಳು ಉತ್ತರ ಕೊಡಲು ಸಮಯ ಕೇಳಿದ್ದಾರೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ:- ಮಾನ್ಯ ಅಧ್ಯಕ್ಷರೆ, ಆ ಪ್ರಶ್ನೆಗಳಿಗೆ ಉತ್ತರಿಸಲು ಸ್ವಲ್ಪ ಸಮಯಬೇಕು. ಮಾನ್ಯ ಸದಸ್ಯರು ಕಾಲುವೆ ವಿಚಾರ, ಡಿಸ್ಟ್ರಿಬ್ಯೂಟರಿ ವಿಚಾರ ಕೇಳಿದ್ದಾರೆ. ಇರಿಗೇಷನ್ ಮಿನಿಸ್ಟ್ರಿಯಿಂದ ಉತ್ತರ ತರಿಸಬೇಕು, ಅದಕ್ಕಾಗಿ ಸ್ವಲ್ಪ ಟೈಮ್ ಬೇಕು

8ನೇ ಪಂಚವಾರ್ಷಿಕ ಯೋಜನೆಯ ವೆಚ್ಚ.

115(774) ಶ್ರೀ ಆರ್.ಬಿ. ಚೌಧರಿ (ಸಿಂಧಗಿ):- ಮಾನ್ಯ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) 8ನೇ ಪಂಚವಾರ್ಷಿಕ ಯೋಜನೆಯ ಅಂದಾಜು ವೆಚ್ಚ ಎಷ್ಟು?

2) ಇದರಲ್ಲಿ ಕೃಷ್ಣಾ ಮೇಲ್ದಂಡೆಗೆ ಒದಗಿಸಲಾಗಿರುವ ಹಣ ಎಷ್ಟು?

ಶ್ರೀ ಕೆ.ಎಸ್. ನಾಗರತ್ನಮ್ಮ (ಯೋಜನೆ ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು.):-

1) ಪ್ರಸ್ತಾಪಿಸಲಾದ ವೆಚ್ಚ ರೂ.11000-00 ಕೋಟಿಗಳು.

2) ಕೃಷ್ಣಾ ಮೇಲ್ದಂಡೆ ಯೋಜನೆ, ಹಂತ-1ಕ್ಕೆ ಪ್ರಸ್ತಾಪಿಸಲಾದ ವೆಚ್ಚ ರೂ.927-57 ಕೋಟಿಗಳು.

ಶ್ರೀ ಆರ್.ಬಿ. ಚೌಧರಿ:- ಮಾನ್ಯ ಅಧ್ಯಕ್ಷರೇ, 8ನೇ ಪಂಚವಾರ್ಷಿಕ ಯೋಜನೆಯ ಅಂದಾಜು ವೆಚ್ಚ 11 ಸಾವಿರ ಕೋಟಿ ರೂಪಾಯಿಗಳು ಎಂದು ತಿಳಿಸಿದ್ದಾರೆ. ಇದು ಯೋಜನಾ ಆಯೋಗದಿಂದ ಅಂಗೀಕರಿಸಲಾಗಿದೆಯೇ ಎಂದು ಕೇಳಬಯಸುತ್ತೇನೆ. ಇದನ್ನು ಅಂಗೀಕರಿಸದಿದ್ದರೆ ಏನಾದರೂ ಬದಲಾವಣೆ ಮಾಡುತ್ತೀರಾ ಎಂಬುದನ್ನು ತಿಳಿಯಬಯಸುತ್ತೇನೆ. ಒಂದು ವೇಳೆ ಬದಲಾವಣೆಯಾದಲ್ಲಿ 11 ಸಾವಿರ ಕೋಟಿಯಲ್ಲಿ ಖೋತ ಆಗುತ್ತದೆಯೆ?

ಶ್ರೀಮತಿ ಕೆ.ಎಸ್.ನಾಗರತ್ನಮ್ಮ:- 11 ಸಾವಿರ ಕೋಟಿ ಏನಿದೆ ಇದು ಸೆಂಟ್ರಲ್ ಗವರ್ನ್‌ಮೆಂಟ್‌ನಲ್ಲಿ ಚರ್ಚೆಯಾಗಿಲ್ಲ. ಯಾವ ಸ್ಟೇಟ್‌ನಲ್ಲೂ ಡಿಸ್ಕಸ್ ಆಗಿಲ್ಲ. ಈ ವರ್ಷದ್ದು 1915 ಕೋಟಿ ಎನ್ನುವುದು ಮುಖ್ಯಮಂತ್ರಿ ಮತ್ತು ಪ್ಲಾನಿಂಗ್ ವೈಸ್ ಚೇರ್ಮನ್ ಅವರ ಜೊತೆಯಲ್ಲಿ ಚರ್ಚೆಯಾಗಿದೆ. ಏನಾದರೂ ಜಾಸ್ತಿ ಕಡಿಮೆ ಆಗುವುದು ಎಂದರೆ ಮಧ್ಯಾಹ್ನ ಏನು ಬಜೆಟ್ ಮಂಡಿಸುತ್ತಾರೆ, ಅದರಲ್ಲಿ ಗೊತ್ತಾಗುತ್ತದೆ. ಆಗ ಈ ವಿವರ ಎಲ್ಲ ತಿಳಿಯಬಹುದು.

ಶ್ರೀ ಆರ್.ಬಿ. ಚೌಧರಿ:- ಇದರಲ್ಲಿ ಕೃಷ್ಣಾ ಮೇಲ್ದಂಡೆ ಒಂದನೇ ಹಂತಕ್ಕೆ 27.57ಕೋಟಿ ಎಂದು ಹೇಳಿದ್ದಾರೆ. ಈ ಒಂದನೇ ಹಂತ ಯಾವಾಗ ಮುಗಿಯುತ್ತದೆ ಎಂದು ತಿಳಿಯಬಯಸುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ:- ಕೃಷ್ಣಾ ಮೇಲ್ದಂಡೆ ಯೋಜನೆ ಒಂದನೇ ಹಂತದ ವೆಚ್ಚ 927.57ಕೋಟಿ ರೂಪಾಯಿಗಳು.

ಶ್ರೀ ಆರ್.ಬಿ. ಚೌಧರಿ:- ಇದು ನನಗೆ 027.57 ತರಹ ಕಾಣಿಸಿತ್ತು.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ:- ಅಲ್ಲ, ಅದು 927.57 ಕೋಟಿ ರೂಪಾಯಿ.

ಶ್ರೀ ಆರ್.ಬಿ. ಚೌಧರಿ:- ಇದು ಯಾವಾಗ ಮುಗಿಯುತ್ತದೆ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ:- ಆದಷ್ಟು ಬೇಗ ಮುಗಿಸುತ್ತೇವೆ.

ಶ್ರೀ ಡಿ.ಬಿ. ಚಂದ್ರೇಗೌಡ:- 8ನೇ ಪಂಚವಾರ್ಷಿಕ ಯೋಜನೆಯ ಕರಡು ತಯಾರಾಗಿದೆ ಎಂದು ನಾವು ತಿಳಿದುಕೊಂಡಿದ್ದೇವೆ; ಅಷ್ಟೆ. ಕರ್ನಾಟಕದ ವಾರ್ಷಿಕ ಯೋಜನೆಯ ಗಾತ್ರ ಎಷ್ಟೆಂಬುದು ನಮಗೆ ಸ್ಪಷ್ಟವಾಗಿ ಸಿಕ್ಕಿಲ್ಲ. ಪತ್ರಿಕೆಗಳಲ್ಲಿ ಮೊದಲು 1915 ಕೋಟಿ ಎಂದು ಬಂದಿದೆ. ಆಮೇಲೆ ಪುನಃ ಪರಿಶೀಲನೆಯಾಗಿ ಹತ್ತಿರ ಹತ್ತಿರ 1994 ಕೋಟಿ ಮೀರಬಹುದು, ಅಂದರೆ ಹತ್ತಿರ ಹತ್ತಿರ 2 ಸಾವಿರ ಕೋಟಿ ಎಂದು ಬಂದಿದೆ. ಇದ್ದರಿಂದ ಈ ಬಗ್ಗೆ ನಿಖರವಾದ ಮಾಹಿತಿಯನ್ನು ಕೊಡುವುದಕ್ಕೆ ಸಾಧ್ಯವೇ? ಎರಡನೆಯದು ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-1ಕ್ಕೆ ಪ್ರಸ್ತಾಪಿಸಲಾದ ವೆಚ್ಚ 927 ಕೋಟಿ ಎಂದು ಹೇಳಿದ್ದೀರಿ. 8ನೇ ಪಂಚವಾರ್ಷಿಕ ಯೋಜನೆ ಬಹಳ ಪ್ರಾಮುಖ್ಯವಾದಂಥ ಯೋಜನೆ. ನಾನು ಕೃಷ್ಣಾ ಮತ್ತು ಕಾವೇರಿ ಜಲಾನಯನ ಪ್ರದೇಶಗಳಿಗೆ ಸೀಮಿತವಾಗಿ ಕೇಳುತ್ತೇನೆ. ಕಾವೇರಿ ಜಲಾನಯನ ಪ್ರದೇಶದಲ್ಲಿ ಸಮಸ್ಯೆ ಬಗೆಹರಿಯದೇ ಇರುವುದರಿಂದ ಬಹುಶಃ ಈ ಯೋಜನೆ ಹೇಗೆ ಇದರ ವ್ಯಾಪ್ತಿಯೊಳಗೆ ಬರುತ್ತದೆ ಎಂದು ಕಾದು ನೋಡಬೇಕು. ಆದರೆ ಕೃಷ್ಣಾ ಯೋಜನೆ ಬಗ್ಗೆ 8ನೇ ಪಂಚವಾರ್ಷಿಕ ಯೋಜನೆ ಮುಗಿಯುವಷ್ಟರ ಹೊತ್ತಿಗೆ ಹತ್ತಿರ ಹತ್ತಿರ 2ಸಾವಿರ ಇಸವಿಯನ್ನು ನಾವು ತಲುಪಿರುತ್ತೇವೆ. ಆ ಕಾರಣ ಬಚಾವತ್ ಅವಾರ್ಡ್‌ನಲ್ಲಿರುವಂತೆ ಸುಮಾರು 734 ಟಿ.ಎಂ.ಸಿ. ನೀರನ್ನು ಅಷ್ಟರೊಳಗೆ ಬಳಕೆ ಮಾಡಿಕೊಳ್ಳದಿದ್ದರೆ ನಮ್ಮ ಹಕ್ಕಿಗೆ ಚ್ಯುತಿಯಾಗುತ್ತದೆ. ಈ ದೃಷ್ಟಿ ಇಟ್ಟುಕೊಂಡು ಈ ಕೃಷ್ಣಾ ಮೇಲ್ದಂಡೆ ಯೋಜನೆಗೆ ಆಗತಕ್ಕಂಥ ಒಟ್ಟು ಯೋಜನಾವೆಚ್ಚದ ಗಾತ್ರದ ಅಂದಾಜನ್ನು ತಯಾರು ಮಾಡುವಾಗ ನಮ್ಮ ಹಕ್ಕನ್ನು ಕೂಡ ಗಮನದಲ್ಲಿಟ್ಟುಕೊಂಡು ಈ ಯೋಜನೆಗೆ ಬೇಕಾದಂಥ ಪೂರ್ಣ ಹಣವನ್ನು ಒದಗಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆಯೆ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ:- ನಮ್ಮ ಮೊದಲನೇ ಪ್ರಶ್ನೆಗೆ 1915 ಕೋಟಿ ಎಂದು ಮೀಂಟಿಂಗ್‌ನಲ್ಲಿ ಅಗ್ರಿಮಂಟ್ ಆಗಿದೆ. ಎರಡನೆಯ ಸಲ ಪತ್ರಿಕೆಯಲ್ಲಿ ಏನು ಬಂದು ಅದು ಸತ್ಯವಾದ ಅಂಶ ಅಲ್ಲ. ಇದಿಷ್ಟೇ ನಮಗೆ ಗೊತ್ತಿರುವುದು. ಮುಂದಿನ ಬಜೆಟ್‌ನಲ್ಲಿ ಎಲ್ಲಾ ವಿವರಗಳು ಬರುತ್ತವೆ. ಕೃಷ್ಣಾ ನದಿ ನೀರಿನ ವಿಚಾರದಲ್ಲಿ ನೀವು ಹೇಳುತ್ತಾ ಬಚಾವತ್ ಅವಾರ್ಡ್ ಇದೆ, ನೀರನ್ನು ಉಪಯೋಗ ಮಾಡಿಕೊಳ್ಳುತ್ತೀರಾ, ಅದಕ್ಕಾಗಿ ಎಷ್ಟರ ಮಟ್ಟಿಗೆ ಹಣ ಇಡುತ್ತೀರಿ, ಈ ಕೆಲಸ ಮಾಡುತ್ತೀರಾ ಎಂದು ಹೇಳಿದ್ದೀರಿ. ಅದನ್ನು ಮಾಡಲೇಬೇಕಾಗುತ್ತದೆ. ಅದನ್ನು ಮಾಡುವುದಕ್ಕೆ ಸರ್ಕಾರ ಪ್ರಯತ್ನಪಡುತ್ತದೆ.

ಶ್ರೀ ಎಚ್. ವಿಶ್ವಾಂತಯ್ಯ:- ಕೃಷ್ಣಾ ಮೇಲ್ದಂಡೆ ಯೋಜನೆಗೆ 8ನೇ ಪಂಚವಾರ್ಷಿಕ ಯೋಜನೆಯಲ್ಲಿ 927 ಕೋಟಿ ಎಂದು ಪ್ರಸ್ತಾಪಿಸಿದ್ದಾರೆ. ಈ ಕೃಷ್ಣಾ ಮೇಲ್ದಂಡೆ ಯೋಜನೆಗೆ ಪೂರೈಕೆಗೆ ಮಾಡಬೇಕಾದ ಹಣಕ್ಕೆ ಎಷ್ಟನೇ ಒಂದು ಭಾಗ ಇದು ಆಗುತ್ತದೆ? ಹಾಗಿದ್ದರೆ ಕೃಷ್ಣಾ ಮೇಲ್ದಂಡೆ ಯೋಜನೆಗೆ ಎಲ್ಲ ಹಣವನ್ನು ಮುಂದಿನ ಎರಡು ಯೋಜನೆಯಲ್ಲಿ ಕೊಡಿಸುವುದಕ್ಕೆ ಸಾಧ್ಯವಾಗುತ್ತದೆಯೆ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ:- ಎಷ್ಟನೇ ಒಂದು ಭಾಗ ಎಂದು ಇಲ್ಲಿ ಲೆಕ್ಕಾಚಾರಮಾಡಿ ಹೇಳುವುದಕ್ಕೆ ಆಗುವುದಿಲ್ಲ. ನಮ್ಮ ಇನ್‌ಕಮ್ ಹೇಗೆ ಬರುತ್ತದೆ ಎಂದು ನೋಡಿಕೊಂಡು ಪ್ರಯತ್ನ ಪಡುತ್ತಿದ್ದೇವೆ. ಪ್ರಯತ್ನ ಪಟ್ಟು ಮಾಡಿಯೇ ಮಾಡುತ್ತೇವೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೇ, ತಾವು ಇದರ ಬಗ್ಗೆ ಸ್ವಲ್ಪ ಸಹಾಯ ಮಾಡಬೇಕು. ಉತ್ತರ ನಿಖರವಾಗಿಲ್ಲ, ಪ್ರಪಂಚ ಸಂಸ್ಥೆ ಒಂದು ಕಡೆ, ಯೋಜನಾ ಆಯೋಗದವರು ಒಂದು ಕಡೆ. ಸುಮಾರು 3,600 ಕೋಟಿ ರೂಪಾಯಿಗಳು ನಮಗೆ ಬೇಕು. ಇಲ್ಲಿ ಒದಗಿಸಿರತಕ್ಕಂಥಾದ್ದು, ಇದರ ಕಾಲು ಭಾಗ ಆಗುತ್ತದೆ. ಈ ಕಾಲು ಭಾಗದಲ್ಲಿ ಎರಡು ಸಾವಿರ ಇಸವಿಯೊಳಗೆ ನಾವು ನಮ್ಮ ನೀರಿನ ಹಕ್ಕನ್ನು ಬಳಕೆ ಮಾಡಿಕೊಳ್ಳದೇ ಇದ್ದರೆ ತೊಂದರೆಯಾಗುತ್ತದೆ. ಸುಮ್ಮನೆ ಬಳಕೆ ಮಾಡಿಕೊಳ್ಳುತ್ತೇವೆಂದು ಇಲ್ಲಿ ಹೇಳಿದರೆ ಆಗುವುದಿಲ್ಲ. ಈ ಯೋಜನಾ ವೆಚ್ಚ ಮತ್ತು ನಮಗೆ ಬರತಕ್ಕ ಪ್ರಪಂಚ ಸಂಸ್ಥೆಯ ನೆರವು-ಇವೆರಡನ್ನೂ ಕೂಡ್ರೀಕರಿಸಿ, ಒಟ್ಟು 3,600 ಕೋಟಿ ರೂಪಾಯಿಗಳನ್ನು ಅಂದಾಜು ಮಾಡಿದ್ದೇವೆ. ಇದನ್ನು ಪೂರೈಸತಕ್ಕ ನಿಖರವಾದ ನಿರ್ಧಾರ ಈ ಸರ್ಕಾರಕ್ಕೆ ಇದ್ದರೆ, 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಇದನ್ನು ಸ್ಪಷ್ಟಪಡಿಸಬೇಕು. ಹೀಗಾಗದೇ ಇದ್ದರೆ, ನಮ್ಮ ರಾಜ್ಯದ ಹಿತಕ್ಕೆ ಅತ್ಯಂತ ಧಕ್ಕೆಯಾಗುತ್ತದೆ. ಆ ಕಾರಣ ತಮ್ಮ ಮೂಲಕ ಅವರಿಗೆ ಮನವಿ ಮಾಡುತ್ತೇನೆ. ಇಷ್ಟು ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಪೂರೈಸತಕ್ಕ ನಿಖರವಾದ ಭರವಸೆಯನ್ನು ಈ ಸದನಕ್ಕೆ ಕೊಡುತ್ತಾರೆಯೇ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ:- ಮಾನ್ಯ ಅಧ್ಯಕ್ಷರೇ ಮಾನ್ಯ ಚಂದ್ರೇಗೌಡರ ಪ್ರಶ್ನೆಗೆ ಉತ್ತರ ಹೇಳುವುದಾದರೆ ನಮಗೆ 3,600ಕೋಟಿ ರೂಪಾಯಿಗಳು ಬೇಕಾಗುತ್ತದೆ. ಅದನ್ನು ತರುವುದಕ್ಕಾಗುವುದಿಲ್ಲ ಎಂದು ಅವರಿಗೆ ಏನು ಗೊತ್ತು. ನಾವು ಪ್ರಯತ್ನ ಮಾಡುತ್ತಲೇ ಇದ್ದೇವೆ, ಏನಾದರೂ ಮಾಡಿ, ಬಾಕಿ ಎಲ್ಲಾ ವ್ಯವಹಾರಗಳನ್ನೂ ನಿಲ್ಲಿಸಿ, ಇದಕ್ಕೆ ಒತ್ತುಕೊಟ್ಟು, ಇದನ್ನು ಆಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

(INTERRUPTIONS)

MR. SPEAKER:- Rs.3,000 crores at to-day's rates. Alright, whatever it is. Except Mr. Kaujalagi, who is on his legs, all of you were in Government at one time or the other. So, when the Budget is going to be placed in this House in a few hours time.....

(INTERRUPTIONS)

MR. SPEAKER:- Now it is too late. It has already been printed. You know that also.

SRI R.V. DESHAPANDE:- Nothing can happen.

SRI S.M. KAUJALAGI:- Rs. 6,000 crores.....

ಅಧ್ಯಕ್ಷರು:- ಮಾನ್ಯ ಕೌಜಲಗಿಯವರೇ ನಿಮಗೆ ಅನುಭವ ಇಲ್ಲ. I am sorry to say this. We are in the first Budget of the 8th Five-year Plan. ಇವತ್ತು ಬರುತ್ತಾ ಇದೆ. I think you have plenty of scope on this.

ಶ್ರೀ ಬಸವರಾಜ ರಾಯರೆಡ್ಡಿ:- ಇದು ಪ್ರತ್ಯೇಕವಾಗಿ ಚರ್ಚೆಯಾದರೆ ಒಳ್ಳೆಯದು.

ಅಧ್ಯಕ್ಷರು:- ಆಗಲಿ, ನೀವು ಬರೆದು ಕಳುಹಿಸಿ. Certainly we will have it. Special discussion - absolutely no problem from my side.

ಶ್ರೀ ಮಸೋಹರ್ ಐನಾಪುರ:- ಈ ವಿಚಾರವಾಗಿ ಮಾನ್ಯ ಸಚಿವರು ಏನು ಹೇಳಿದ್ದಾರೆ, Rs.927.57 crores is proposed for the Upper Krishna Project. Out of the proposed Rs.927.57 crores, whether the Government is in a position to release the entire amount in the 8th Five-year Plan. Second question is, as to when this project can be completed, because we should not meet the fate of the Cauvery, because by 2000 A.D., we have to utilise the water. As Hon. Leader of the Oposition Mr. Chandre Gowda said, we should not meet the fate of the Cauvery, we should utilise the water in Krishna.

ಅದಕ್ಕೋಸ್ಕರವಾಗಿ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಬಿಜಾಪುರ ಜಿಲ್ಲೆಯಲ್ಲಿ ಕೃಷ್ಣಾ ನದಿಯ ಕಮ್ಯಾಂಡ್ ಏರಿಯಾದಲ್ಲಿ ಬರತಕ್ಕ ಇಂಡಿ ಮತ್ತು ಸಿಂಧಗಿ ತಾಲ್ಲೂಕಿನಲ್ಲಿ ಯಾವ ಕಾಮಗಾರಿಗಳನ್ನೂ ತೆಗೆದುಕೊಳ್ಳುವುದಕ್ಕೆ ಬರುತ್ತಾ ಇಲ್ಲ, ಈ ಕಡೆ ಕೃಷ್ಣಾ ಮೇಲ್ಗಡೆ ಪೂರ್ತಿಯಾಗುತ್ತಾ ಇಲ್ಲ, ಮತ್ತೊಂದು, ನಾನು ಏಕೆ ಹೇಳುತ್ತಿದ್ದೇನೆಂದರೆ....

ಅಧ್ಯಕ್ಷರು:- ಮಲ್ಲಾರಿಗೌಡ ಪಾಟೀಲರ ಡಿಮ್ಯಾಂಡ್ ಬರುತ್ತಾ ಇದೆ, ಇದನ್ನು ಆಗ ಹೇಳಿ.

ಪಂಚಾಯಿತಿ ವ್ಯಾಪ್ತಿಯೊಳಗೆ ಬರುವ ಕಟ್ಟಡಗಳಿಗೆ ವಿದ್ಯುಚ್ಛಕ್ತಿಯ ಸರಬರಾಜು.

116 (639), ಶ್ರೀ ಬಿ.ಐ. ಪಾಟೀಲ್ (ಉಚಗಾಂವ):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಂಡಲ ಪಂಚಾಯಿತಿ ವ್ಯಾಪ್ತಿಯೊಳಗೆ ಬರುವ ಕಟ್ಟಡಗಳಿಗೆ ನಗರಾಭಿವೃದ್ಧಿ ಅಥವಾ ತಹಶೀಲ್ದಾರ್‌ರವರ ಅನುಮತಿ ಇಲ್ಲದೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡುತ್ತಿರುವುದು ನಿಜವೇ?

ಆ) ಹಾಗಿದ್ದಲ್ಲಿ, ಆ ಪದ್ಧತಿಯಲ್ಲಿ ಏನಾದರೂ ಬದಲಾವಣೆ ಇವೆಯೇ? ಅದಕ್ಕೆ ಕಾರಣಗಳೇನು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

ಅ) ಹೌದು

ಆ) ಹೌದು, ಪದ್ಧತಿಯಲ್ಲಿ ಬದಲಾವಣೆ ಇದೆ. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಅನಧಿಕೃತ ಕಟ್ಟಡಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡಬಾರದೆಂದು ನಿರ್ದೇಶನ ನೀಡಲಾಗುವುದು.

SRI B.I. PATIL:- In what UD Athe matter of electrification to Manda Panchayat is related? My second question is whether the Government will follow the earlier policy to avoid hardship to the public.

SRI K.J. GEORGE:- When we declare the lands under Urban Development Authorities, the land between the Corporation limit and the green-belt will come under the jurisdiction of each Urban Development Authority. Eventhough there are some Mandal Panchayats, they can only control gramthanas. Wherever gramthana land is there, the concerned Mandal Panchayat can give licence for the construction of buildings. But, unfortunately, in many places where the lands come under the jurisdiction of the Urban Development Authorities, the lands have been converted into residential purpose and Mandal Panchayats are giving licences for construction of buildings. That is unauthorised construction. That is why we instructed the KEB people that before giving electricity to such